ಮಾಡಿಕೊಂಡು ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಆಗುವುದಕ್ಕೆ ಕಾಲಾವಕಾಶವನ್ನು ಕೇಳಿದ್ದೇವೆ. ಕೇಂದ್ರದ ನಮ್ಮ ನೀರಾವರಿ ಸಚಿವರನ್ನು ಭೇಟಿ ಆಗುತ್ತೇವೆ. ಅಲ್ಲಿ ಯಾವ ವಿಷಯಗಳನ್ನು ಮಂಡನೆ ಮಾಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದರ ಜೊತೆ ನಮ್ಮ Advocate ಜೊತೆ ಸಮಾಲೋಚನೆ ಮಾಡಿ ಮಾಡುತ್ತೇವೆ. ಈ ರೀತಿಯ ಪ್ರೊಸೆಸ್ ನಾವು ಮಾಡುತ್ತಿದ್ದೇವೆ. ಹಾಗಾಗಿ ಕಾವೇರಿ ಜಲಾನಯನದ ಪ್ರದೇಶದಲ್ಲಿರತಕ್ಕಂತಹ ನಮ್ಮ ರೈತ ಬಂಧುಗಳಿಗೆ ಹಾಗೂ ಅಲ್ಲಿರತಕ್ಕಂತಹ ಜನರ ಭಾವನೆಗಳಿಗೆ ಸ್ಪಂದನೆ ಮಾಡುವಂತಹ ಕೆಲಸ ಮತ್ತು ನೆಲ ಜಲ ರಕ್ಷಣೆ ಮಾಡುವ ಪ್ರಯತ್ನ ನಾವು ಎಲ್ಲಾ ರೀತಿಯಿಂದ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಶಾಂತತೆ ಕಾಪಾಡಿಕೊಳ್ಳುವ ವಿನಂತಿ ನಾನು ಮಾಡುತ್ತಿದ್ದೇನೆ. ಕಾನೂನು ರೀತಿಯಲ್ಲಿ ಹೋರಾಟ ಮಾಡುವುದು ಯಾವ ಪ್ರಯತ್ನ ಮಾಡಬೇಕು ಅವೆಲ್ಲಾ ಮಾಡುತ್ತಿದ್ದೇವೆ. ನಾಳೆ ಮುಂದಿನ ಪ್ರಯತ್ನಕ್ಕೆ ನಾವು ಹೋಗುತ್ತಿದ್ದೇವೆ. ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ. ಇನ್ನು ಏನು ಪ್ರಯತ್ನ ಮಾಡಬೇಕು, ಇನ್ನೂ ಏನು ಕ್ರಮ ಕೈಗೊಳ್ಳಬೇಕು ಎನ್ನುವಂಥದ್ದನ್ನು ನಾವು ಮುಂದುವರೆಸುತ್ತಿದ್ದೇವೆ. ಆ ದೃಷ್ಟಿಯಿಂದ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಜೆ.ಡಿ.ಎಸ್ ಶಾಸಕಾಂಗ ಪಕ್ಷದ ನಾಯಕರು ಆದ ಮಾನ್ಯ ರೇವಣ್ಣರವರು ಮತ್ತು ಇನ್ನಿತರ ಎಲ್ಲಾ ಶಾಸಕರು, particularly ಆ ಭಾಗದಿಂದ ಬಂದಂತಹ ಶಾಸಕರು ಅಲ್ಲಿದ್ದಂತಹ ಪರಿಸ್ಥಿತಿಯ ವಿವರಗಳನ್ನು ಕೊಟ್ಟಿದ್ದಾರೆ. ಅವೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದು ನಿರ್ಣಯ ಕೈಗೊಳ್ಳುತ್ತೇವೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ ಇವರು CMC ಮುಂದೆ CRE ಮುಂದೆ ಸುಪ್ರೀಂ ಕೋರ್ಟ್ ಮುಂದೆ ಏನು ಮಂಡಿಸಿದ್ದಾರೆ ಎನ್ನತಕ್ಕಂಥದ್ದು, ಇದರಿಂದ ಜನಗಳಿಗೆ ಸಮಾಧಾನ ಆಗುವುದಿಲ್ಲ. ನಮ್ಮ ಹತ್ತಿರ ನೀರು ಇಲ್ಲ. ನೀರು ಕೊಡಬಾರದು ಎಂದು ಜನರ ಇಚ್ಚೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸುಧೀರ್ಘವಾಗಿ ಹೇಳಿದರು. ಅವರ ರಿಪ್ಲೇಯಲ್ಲಿ ನೀರು ಬಿಡುತ್ತೇವೆ ಅಥವಾ ಬಿಡುವುದಿಲ್ಲವೆಂದು ಏನೂ ಹೇಳಲಿಲ್ಲ. ಅವರ ಮಾತು ಮತ್ತು ಅವರ statement ನೋಡಿದರೆ ನಾಳೆ ಭೇಟಿ ಆಗಲಿದ್ದೇವೆ, ಈ ಮಧ್ಯೆ ನಮ್ಮ ಹಿರಿಯ ನ್ಯಾಯವಾದಿಗಳು ಹಾಗೂ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ ಮುಂದಿನ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳಿದರು. ನೀರು ಬಿಡುತ್ತಾರೆಂದು ಭಾಸವಾಗುತ್ತಿದೆ. ನೀರು ಬಿಡುವುದಕ್ಕೆ ಇವರು ತಯಾರಾಗಿದ್ದಾರೆ. ಅದು ಬಿಟ್ಟರೆ ನಮ್ಮ ಭಾಗದ ರೈತರು ಯಾರೂ ಕೂಡ ಉಳಿಯುವುದಿಲ್ಲ.

ಅಲ್ಲಿ ಯಾವ ಬೆಳೆಯೂ ಉಳಿಯುವುದಿಲ್ಲ. ರೈತರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಬೆಂಗಳೂರು ನಗರ, ಮೈಸೂರು ನಗರ, ಮಂಡ್ಯ ಹಾಸನ ಹಾಗೂ ಇನ್ನಿತರೆ ಬೇರೆ ಬೇರೆ ನಗರಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದ ಹಾಗಾಗುತ್ತದೆ. ಬಹಳ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ಆದ್ದರಿಂದ ಇವತ್ತು ನಾವು ಐದು ದಿನ 10,000 ಕ್ಯೂಸೆಕ್ಸ್ ನೀರು ಬಿಡುತ್ತೇವೆಂದರೆ, ಸುಮಾರು ಐದು ಟಿಎಮ್‌ಸಿ. ನೀರು ಹೋಗಿ ಬಿಡುತ್ತದೆ. ಎಲ್ಲಾ ನಾಲ್ಕು ಜಲಾಶಯಗಳಿಂದ ಇರುವುದೇ 35 ಟಿಎಂಸಿ ನೀರು ನಮಗೆ ಇನ್ನು ಯಾವ ಮಳೆಯೂ ಬರುವುದಿಲ್ಲ. ಇನ್ನು ಮಳೆ ಬರುವುದು ಮೇ ತಿಂಗಳಲ್ಲಿಯೇ. ಅಲ್ಲಿಯವರೆಗೆ ಯವ ಮಳೆಯೂ ಇಲ್ಲ. ನಿಮ್ಮಲ್ಲಿಯೂ ಮಳೆ ಬರುವುದಿಲ್ಲ. KRS ಮಳೆ ನೀರು ಬರುವುದಿಲ್ಲ. ಹೇಮಾವತಿ, ಹಾರಂಗಿ ಹಾಗೂ ಕಬಿನಿ ಜಲಾಶಯಗಳಿಗೂ ನೀರು ಬರುವುದಿಲ್ಲ. ಅಲ್ಲಿ ನೀರು ಇದೆ, ಅವರಿಗೆ ನೀರು ಬೇಕಾಗಿಲ್ಲ. ಅವರಿಗೆ ಇನ್ನೂ ಮಳೆ ಬರುತ್ತದೆ. ಇನ್ನೂ ಎರಡು–ಮೂರು ತಿಂಗಳವರೆಗೆ ಅವರಿಗೆ ಮಳೆ ಬರುತ್ತದೆ. ನಮಗೆ ಆ ಮಳೆಗಳು ಇಲ್ಲ. ಇಷ್ಟೆಲ್ಲಾ ಇದ್ದರೂ ಕೂಡ ಕುಮಾರಿ ಜಯಲಲಿತಾರವರು ನಮ್ಮ ರಾಜ್ಯದ ಮೇಲೆ ಏಕೆ ಈ ತರಹ ಕೆಂಗಣ್ಣು ಮತ್ತು ವಕ್ರದೃಷ್ಟಿ ಬೀರಿದ್ದಾರೆಂದು ಗೊತ್ತಿಲ್ಲ. ಕರುಣಾನಿಧಿಯವರು ಇದ್ದಾಗ ಇಷ್ಟೊಂದು ಸಮಸ್ಯೆಗಳು ಉದ್ಭವವಾಗುತ್ತಿರಲಿಲ್ಲ. ಅವರು ಸ್ವಲ್ಪ ರೀಸನಬಲ್ ಆಗಿರುತ್ತಿದ್ದರು. ಈ ಅಮ್ಮ ಬಹಳ most un reasonable lady, ಬಹುಶಃ ಮದುವೆ ಆಗದೇ ಇರುವುದೇ ಕಾರಣವೇನೋ ಎಂದು ನಾನು ಅಂದುಕೊಂಡಿದ್ದೇನೆ. She is most unreasonable women ನಾನು ಇದನ್ನು ಬೇಕೆಂದು ಹೇಳುತ್ತಿಲ್ಲ. ಯಾವಾಗಲೂ ಅವರು ಅಧಿಕಾರದಲ್ಲಿ ಇದ್ದಾಗ ನಮಗೆ ಇದೇ ಸಮಸ್ಯೆಗಳು. ಅವರಿಗೆ under ground water ಇದೆ, ಮಳೆ ಬರುತ್ತದೆ. ಮೆಟ್ಟೂರು ಡ್ಯಾಂನಲ್ಲಿ 15 ಟಿಎಮ್‌ಸಿ ನೀರಿದೆ, ತತ್‌ಕ್ಷಣಕ್ಕೆ ಅವರಿಗೆ ಏನೂ ತೊಂದರೆ ಇಲ್ಲ. ನಾವು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗಿತ್ತು. ಈ ಭಾಗದ ರೈತರು ಬಹಳ ಅನ್ಯಾಯಕ್ಕೆ ಒಳಗಾಗುತ್ತಾರೆ. ಬೆಳೆ ನಷ್ಟವಾಗುತ್ತದೆ. ಎರಡು ವರ್ಷಗಳಿಂದ ಬರಗಾಲ ಇದೆ, ಮುಂಗಾರು ಬೆಳೆ ಎಲ್ಲಾ ಹೋಯಿತು, ಹಿಂಗಾರು ಬೆಳೆಯೂ ಒಂದಷ್ಟು ಬರುವುದು ಹೋಗಿಬಿಟ್ಟರೆ ಅವರು ಎಲ್ಲಿ ಹೋಗಬೇಕು? ರೈತರೆಲ್ಲರೂ ಕೂಲಿ ಹುಡುಕಿಕೊಂಡು ಊರು ಬಿಟ್ಟು ಗುಳೆ ಹೊಗಬೇಕಾಗುತ್ತದೆ. ಇಂತಹ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾವು ಆ ಭಾಗದ ಜನರ ಪ್ರತಿನಿಧಿಗಳಾಗಿ ಅವರಿಗೆ ಸಾಂತ್ವಾನ ಹೇಳುವುದು ಬಹಳ ಕಷ್ಟ. ಮಾನ್ಯ ಮುಖ್ಯಮಂತ್ರಿಗಳು ಧೈರ್ಯ ತೆಗೆದುಕೊಂಡು ಸ್ಪಷ್ಟವಾಗಿ ನೀರು ಬಿಡುವುದಿಲ್ಲವೆಂದು ಹೇಳಬೇಕು. ಇಲ್ಲದೇ ಹೋದರೆ ಅವರ ಈ ಹೇಳಿಕೆಯಲ್ಲಿ ಏನೂ ಇಲ್ಲ. 1892ನೇ

ಅಗ್ರಿಮೆಂಟ್, 1924ನೇ ಅಗ್ರಿಮೆಂಟ್ ಅಲ್ಲಿಂದ ಏನೇನಾಯಿತು, ಟ್ರಿಬ್ಯುನಲ್ ಏನು ಮಾಡಿತು, ಇಂಟರಿಮ್ ಆರ್ಡರ್, ಫೈನಲ್ ಅವಾರ್ಡ್, ಈಗ ಸುಪ್ರೀಂ ಕೋರ್ಟಿನ ಮುಂದೆ ಕೇಸ್ ಇರುವುದು, ಈ ತರಹ ಹೇಳಿಕೊಂಡು ಬಂದರೆ ಅದರಿಂದ ಅವರಿಗೆ ನೀರು ಸಿಕ್ಕ ಹಾಗಾಗುವುದಿಲ್ಲ. ನಮ್ಮಲ್ಲಿ ನೀರು ಇಲ್ಲದೆ ಇರುವುದರಿಂದ ಇವರ ಹೇಳಿಕೆ ನಮಗೆ ಏನೇನು ತೃಪ್ತಿ ತಂದಿಲ್ಲ, ಇವರ ಹೇಳಿಕೆ ನೋಡಿದರೆ ನೀರು ಬಿಡುವುದಕ್ಕೆ ತಯಾರಾಗಿರುವ ಹಾಗೆ ಕಾಣುತ್ತದೆ. ಸುಪ್ರೀಂಕೋರ್ಟಿನ ಆದೇಶವನ್ನು ಪಾಲನೆ ಮಾಡುವುದಕ್ಕೆ ಇವರು ಹೊರಟಿದ್ದಾರೆ. ರೈತರ ಪರವಾಗಿ ನಾವು ನಿಲ್ಲಬೇಕಾಗುತ್ತದೆ. ಇದನ್ನು ಪ್ರತಿಭಟನೆ ಮಾಡಿ ಧರಣಿ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

(ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ಶಾಸಕರು ಬಾವಿಗೆ ಬಂದು ಧರಣಿ ಮಾಡಲು ಪ್ರಾರಂಭಿಸಿದರು)

**ಶ್ರೀ ಹೆಚ್.ಡಿ. ರೇವಣ್ಣ:–** (ಹೊಳೆನರಸೀಪುರ):– ಮನ್ಯ ಅಧ್ಯಕ್ಷರೆ, ನಾನು ಮತ್ತು ನಮ್ಮ ಪಕ್ಷದ ಮಾನ್ಯ ಸದಸ್ಯರುಗಳು ಎಲ್ಲಾ ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಒಂದು ಕಡೆ ಕುಡಿಯುವ ನಿರು ಇಲ್ಲ. ಒಂದು ಕಡೆ ಕೆರೆ ಕಟ್ಟೆಗಳಲ್ಲಿ ನೀರು ಇಲ್ಲ. ಸುಮಾರು ಐದು ಲಕ್ಷ ರೂಪಾಯಿಗಳ ಬೆಳೆ ಹಾಳಾಗಿ ಹೋಗುತ್ತಿದೆ. ನಾವು ಇದನ್ನು ಮಾನ್ಯಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ನೆನ್ನೆ ಸಾಯಂಕಾಲದವರೆಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ನೀರು ಬಿಡುವುದಿಲ್ಲವೆಂದು ದೃಢ ನಿಲುವು ತೆಗೆದುಕೊಂಡಿದ್ದರು. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಹೇಳಬೇಕಾಗುತ್ತದೆ. ಅವರು ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗಿ ಮನವರಿಕೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಇವೆರಡರಿಂದಲೂ ಈ ರಾಜ್ಯದ ಜನತೆಗೆ ಅನ್ಯಾಯವಾಗುತ್ತಿದೆ. ಕಾವೇರಿ ಬೇಸಿನ್ ಜನತೆಗೆ ಅನ್ಯಾಯವಾಗಿದ್ದರೆ ಇದಕ್ಕೆ ಈ ಎರಡೂ ಸರ್ಕಾರಗಳು ಕಾರಣಕರ್ತರು ಎಂದು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರ ಇವತ್ತು ಇದರ ಮಧ್ಯಪ್ರವೇಶ ಮಾಡಬೇಕಾಗುತ್ತದೆ. ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುವಂತಹ ಸನ್ನಿವೇಶ ಇದೆ. ಇದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನೇರ ಹೊಣೆಯಾಗುತ್ತದೆ ಎಂದು ಹೇಳಿ ನಾವೂ ಸಹ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

**(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**